ಸ್ಮಾರಕಗಳ ಕಥೆ

# ಯುದ್ಧದಲ್ಲಿ ಮಡಿದವರ ನೆನಪಿನ ಮನೆ



**1934ರಲ್ಲಿ ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ನಿರ್ಮಾಣಗೊಂಡ 'ದ ಶ್ರೈನ್ ಆಫ್ ರಿಮೆಂಬರೆನ್ಸ್', ಯುದ್ಧದಲ್ಲಿ ಪ್ರಾಣ ತೆತ್ತವರ ನೆನಪಿಗಾಗಿ ಮುಡಿಪಿಟ್ಟ ಯುದ್ಧ ಸ್ಮಾರಕ.**

**■ ಕೋಟೂರ್ ಸಂಪತ್**

ಆಸ್ಟ್ರೇಲಿಯಾ ಖಂಡದ ಮೆಲ್ಬರ್ನ್‌ನ ವಿಕ್ಟೋರಿಯಾ ರಾಜ್ಯದಲ್ಲಿರುವ, 'ದ ಶ್ರೈನ್' ಎಂದೇ ಸಾಮಾನ್ಯವಾಗಿ ಕರೆಯಲಾಗುವ, 'ದ ಶ್ರೈನ್ ಆಫ್ ರಿಮೆಂಬರೆನ್ಸ್' ಒಂದು ಯುದ್ಧ ಸ್ಮಾರಕ. ಪ್ರಥಮ ಪ್ರಪಂಚ ಯುದ್ಧದಲ್ಲಿ ಸೇವೆ ಸಲ್ಲಿಸಿದ, ಜೀವ ಅರ್ಪಿಸಿದ ವಿಕ್ಟೋರಿಯಾ ರಾಜ್ಯದ ನಾಗರಿಕರಿಗೆ ಗೌರವಾರ್ಥವಾಗಿ ನಿರ್ಮಿಸಲಾದ ಸ್ಮಾರಕ ಭವನ.

ಪ್ರಸ್ತುತ ಈ ಸ್ಮಾರಕವನ್ನು ಇಲ್ಲಿನ ಯಾವುದೇ ಯುದ್ಧದಲ್ಲಿ ಸೇವೆ ಸಲ್ಲಿಸಿದ ಆಸ್ಟ್ರೇಲಿಯಾ ನಾಗರಿಕರ ಸ್ಮರಣಾರ್ಥವೆಂದು ಘೋಷಿಸಲಾಗಿದೆ. ಪ್ರತಿ ವರ್ಷ 25 ಏಪ್ರಿಲ್ (ಅನ್‌ಝಾಕ್ ಡೇ) ಮತ್ತು 11 ನವೆಂಬರ್ (ರಿಮೆಂಬರೆನ್ಸ್ ಡೇ) ಸಂದರ್ಭದಲ್ಲಿ ಇಲ್ಲಿ ಸರ್ಕಾರದ ವತಿಯಿಂದ ಯುದ್ಧ ಸೇವೆಯಲ್ಲಿ ಮಡಿದವರ ಸ್ಮರಣೆ, ಪ್ರಾರ್ಥನೆ, ಗೌರವ ಸಲ್ಲಿಸಲಾಗುತ್ತದೆ.

1918ರಲ್ಲಿ ಯುದ್ಧ ಸ್ಮಾರಕವೊಂದನ್ನು ನಿರ್ಮಿಸಬೇಕೆಂಬ ಪ್ರಸ್ತಾವನೆ ಪ್ರಾರಂಭಗೊಂಡು ಸುದೀರ್ಘ ಮಾತುಕತೆಯಲ್ಲಿ ತೊಡಗಿ ಅನೇಕ ಸಲಹೆಗಳು ಒಂದುಗೂಡಿದವು. ಈ ನಿಟ್ಟಿನಲ್ಲಿ ಅತ್ಯುತ್ತಮ ವಿನ್ಯಾಸ ಸಿಗಲೆಂದು ಸಾರ್ವಜನಿಕವಾಗಿ ಸ್ಪರ್ಧೆಯನ್ನೂ ಏರ್ಪಡಿಸಲಾಯಿತು. ಎಂಬತ್ತಮೂರು ನಮೂನೆಗಳು ಸ್ವೀಕೃತವಾಗಿ ಮೊದಲನೆಯ ಮಹಾಯುದ್ಧದ ಕಲಿಗಳಾದ ಫಿಲಿಪ್ ಹಡ್ಸನ್ ಮತ್ತು ಜೇಮ್ಸ್ ವಾರ್ಡ್ರಾಪ್ ಅವರ ವಿನ್ಯಾಸ ಪ್ರಥಮ ಬಹುಮಾನ ಪಡೆಯಿತು.

ವಾಸ್ತುಶಿಲ್ಪ ಪರಿಣತರೂ ಆಗಿದ್ದ ಈ ಸೇನಾವೀರರು ಪ್ರತಿಷ್ಠಿತ ಶಾಸ್ತ್ರೀಯ ಶೈಲಿಯಲ್ಲಿರುವ ಈ ಯುದ್ಧ ಸ್ಮಾರಕವನ್ನು ವಿನ್ಯಾಸ ಮಾಡಿದ್ದರು. ಈ ಸ್ಮಾರಕ ರಚನೆ ಹೆಚ್ಚುಕಮ್ಮಿ ಪ್ರಾಚೀನ ಗ್ರೀಸ್ ದೇಶದ ಮೌಸೊಲಸ ಸಮಾಧಿ ಮತ್ತು ಪಾರ್ಥೆನಾನ್ ಕಟ್ಟಡಗಳ ವಿನ್ಯಾಸವನ್ನು ಆಧರಿಸಿದೆ. ಆದರೆ ಪ್ರಥಮ ಸ್ಥಾನ ಬಂದಿದ್ದರೂ ಇವರ ವಿನ್ಯಾಸಕ್ಕೆ ಕೆಲವರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಅನೇಕ ಕಾಲ ಬರಿಯ ಮಾತುಕತೆ, ವಾದ ವಿವಾದಗಳಲ್ಲಿಯೇ ಸಮಯ ಕಳೆದುಹೋಯಿತು. ಅಂತಿಮವಾಗಿ ಹಡ್ಸನ್ ಮತ್ತು ವಾರ್ಡ್ರಾಪ್ ಅವರ ವಿನ್ಯಾಸವೇ ಎಲ್ಲರ ಒಪ್ಪಿಗೆ ಪಡೆಯಿತು.

ನವೆಂಬರ್ 11, 1927ರಲ್ಲಿ 'ದ ಶ್ರೈನ್ ಆಫ್ ರಿಮೆಂಬರೆನ್ಸ್' ಯುದ್ಧ ಸ್ಮಾರಕಕ್ಕೆ ಅಡಿಪಾಯ ಹಾಕಲಾಯಿತು. 1934, ನವೆಂಬರ್ 11ರಂದು ಪೂರ್ಣಗೊಂಡ ಸ್ಮಾರಕವನ್ನು ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಯಿತು. ಉದ್ಘಾಟನೆಯ ದಿನ ಈ ಸ್ಮಾರಕ ಪ್ರದೇಶದಲ್ಲಿ ಹೆಚ್ಚುಕಮ್ಮಿ ಮೂರು ಲಕ್ಷ ಆಸ್ಟ್ರೇಲಿಯನ್ ನಾಗರಿಕರು ಜಮಾಯಿಸಿದ್ದರು. ಈ ಸ್ಮಾರಕದ ನಿರ್ಮಾಣಕ್ಕೆ ಸರಿಯಾಗಿ ಏಳು ವರ್ಷಗಳು ಹಿಡಿದವು. ಮೆಲ್ಬರ್ನ್ ಆಡಳಿತ ಸರ್ಕಾರ ಮತ್ತು ಸಾರ್ವಜನಿಕ ದೇಣಿಗೆ ಸೇರಿ ಒಟ್ಟು ಇಪ್ಪತ್ತೈದು ಸಾವಿರ ಪೌಂಡುಗಳನ್ನು ಖರ್ಚು ಮಾಡಲಾಯಿತು.

1945ರಲ್ಲಿ ಮುಗಿದ ಎರಡನೆಯ ಪ್ರಪಂಚ ಮಹಾಯುದ್ಧ ಮತ್ತು ತದನಂತರ ಆಸ್ಟ್ರೇಲಿಯಾ ಭಾಗವಹಿಸಿದ ಅನೇಕ ಯುದ್ಧಗಳಲ್ಲಿ ಸೇವೆಗೈದವರಿಗೆ/ಮಡಿದವರಿಗೆ ಈ ಸ್ಮಾರಕದ ಒಳಗೆ ಹೊರಗೆ ಹೆಚ್ಚುವರಿ ಸಣ್ಣ ಪುಟ್ಟ ಮಿನಿ ಸ್ಮಾರಕಗಳನ್ನು ನಿರ್ಮಿಸಿ ಸೇರಿಸಲಾಯಿತು. ಈಗ ಈ ಸ್ಮಾರಕವು ಯುದ್ಧದಲ್ಲಿ ಅಮರರಾದವರ ಸ್ಮರಣಾರ್ಥ ವಾರ್ಷಿಕ ಪ್ರಾರ್ಥನೆಗೂ, ಕೆಲವೊಮ್ಮೆ ಸರಕಾರದ ನೀತಿ ನಿರ್ಣಯಗಳ ವಿರುದ್ಧ ಪ್ರತಿಭಟನೆಗೂ ಬಳಕೆಯಾಗುತ್ತಿದೆ.

(ಚಿತ್ರಕೃಪೆ: ವಿಕಿಕಾಮನ್ಸ್)